ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಸಾವಕನಹಳ್ಳಿ ಗೇಟ್, ದೇವನಹಳ್ಳಿ-562110
ದೂರವಾಣಿ - 29907088

OFFICE OF THE DEPUTY CONSERVATOR OF FORESTS, BENGALURU RURAL DIVISION, SAVAKANALLI GATE, DEVANAHALLI-562110
Email: dcfrur@aranya.gov.in

File No.: KFD-BRD0A4(GEN)/47/2025-DCF
ದಿನಾಂಕ:ಇ-ಸಹಿಯಲ್ಲಿರುವಂತೆ
E Comp. No.:1920807

ರವರಿಗೆ,

ಜಿಲ್ಲಾಧಿಕಾರಿಗಳು ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಮತ್ತು
ಅಧ್ಯಕ್ಷರು, ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡ (SIT).

ಮಾನ್ಯರೇ

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) No.1164/2023, 1.A No. 2079/2007 ಮತ್ತು ರಿಟ್ ಅರ್ಜಿ (ಸಿವಿಲ್) No. 202/1995 ಪ್ರಕರಣಗಳಲ್ಲಿನ ಆದೇಶದಂತೆ ರಚಿಸಲಾಗಿರುವ ಕಂದಾಯ ವಿಭಾಗೀಯ ಮಟ್ಟದ ತಜ್ಞರ ಸಮಿತಿ ಹಾಗೂ ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಗಳಿಗೆ ನಿಗಧಿ ಪಡಿಸಿರುವ ತರಬೇತಿಗೆ ಹಾಜರಾಗುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ : FEE 304 FLL 2025, ಬೆಂಗಳೂರು ದಿನಾಂಕ:30-12-2025
2. ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ಬೆಂಗಳೂರು ವೃತ್ತ ರವರ ಪತ್ರ ಸಂಖ್ಯೆ: ಎ11/ಭೂಮಿ/ಸಿಆರ್-38/2024-26, ದಿನಾಂಕ 07.01.2026

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಪತ್ರದಲ್ಲಿ ಕ್ರೋಢೀಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಿದ್ಧಪಡಿಸುವ ಕುರಿತು ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡ ಹಾಗೂ ಕಂದಾಯ ವಿಭಾಗ ಮಟ್ಟದ ತಜ್ಞರ ಸಮಿತಿಯು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಕಾರ್ಯಾಗಾರವನ್ನು ಹಮ್ಮಿಕೊಳ್ಳಲು ಸೂಕ್ತ ಕಾರ್ಯ ವಿಧಾನವನ್ನು ಜಾರಿಗೊಳಿಸಿ, ಆಯಾ ಸಮಿತಿಗಳ ಮತ್ತು ತಂಡಗಳ ಉಸ್ತುವಾರಿ ವಹಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ರವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ, ಆದೇಶಿಸಲಾಗಿರುತ್ತದೆ.

ಆದ್ದರಿಂದ, ಉಲ್ಲೇಖಿತ (2)ರ ಪತ್ರದಲ್ಲಿ **ದಿನಾಂಕ:12-01-2026 ರಂದು ಪೂರ್ವಾಹ್ನ 11.00 ಗಂಟೆಗೆ ತಮ್ಮ ಅಧ್ಯಕ್ಷತೆಯಲ್ಲಿ ಕಾರ್ಯಗಾರವನ್ನು VC ಮುಖಾಂತರ ನಿಗದಿಪಡಿಸಲಾಗಿದ್ದು**, ಸದರಿ ದಿನದಂದು ಕಂದಾಯ ವಿಭಾಗ ಮಟ್ಟದ ತಜ್ಞರ ಸಮಿತಿ ಹಾಗೂ ಜಿಲ್ಲಾ ಮಟ್ಟದ ವಿಶೇಷ ತನಿಖಾ

ತಂಡದಲ್ಲಿನ ಎಲ್ಲಾ ಸದಸ್ಯರುಗಳು ತಮ್ಮ ಕಛೇರಿಯಲ್ಲಿ ಹಾಜರಾಗಿ ತರಬೇತಿಯಲ್ಲಿ ಪಾಲ್ಗೊಳ್ಳಲು ಸೂಕ್ತ ವ್ಯವಸ್ಥೆಯನ್ನು ತಮ್ಮ ಹಂತದಲ್ಲಿ ಮಾಡಿಕೊಳ್ಳುವಂತೆ ಕೋರುತ್ತಾ, ಕಂದಾಯ ವಿಭಾಗ ಮಟ್ಟದ ತಜ್ಞರ ಸಮಿತಿಯಲ್ಲಿನ ಅಧಿಕಾರಿಗಳು/ ತಮ್ಮ ಎಲ್ಲಾ ಅಧೀನ ಅಧಿಕಾರಿಗಳು ಸದರಿ ಕಾರ್ಯಾಗಾರಕ್ಕೆ ಹಾಜರಾಗುವಂತೆ ಸೂಕ್ತ ನಿರ್ದೇಶನ ನೀಡುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ,

Digitally signed by
SANTHOSHKUMAR GANESAN
Date: 09-01-2026 14:25:11

**ಉಪ ಅರಣ್ಯ ಸಂರಕ್ಷಣಾಧಿಕಾರಿ,**
**ಬೆಂಗಳೂರು ಗ್ರಾಮಾಂತರ ವಿಭಾಗ.**

**ಪ್ರತಿಯನ್ನು:**

1. ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಯ ಉಪ-ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ಮಾಹಿತಿಗಾಗಿ ಹಾಗೂ ದಿನಾಂಕ 12-01-2026 ರಂದು ಸದರಿ ಕಾರ್ಯಾಗಾರದಲ್ಲಿ ಉಪಸ್ಥಿತರಾಗಿರಲು ಕೋರಿದೆ.
2. ವಲಯ ಅರಣ್ಯಾಧಿಕಾರಿಗಳು, ದೇವನಹಳ್ಳಿ ವಲಯ / ದೊಡ್ಡಬಳ್ಳಾಪುರ ವಲಯ / ಹೊಸಕೋಟೆ ವಲಯ / ನೆಲಮಂಗಲ ವಲಯ ರವರಿಗೆ ಕಳುಹಿಸುತ್ತಾ, ಕ್ರೋಢೀಕೃತ ಅರಣ್ಯ ಭೂಮಿಗಳಿಗೆ ಸಂಬಂಧಿಸಿದಂತೆ ಮಾಹಿತಿಯೊಂದಿಗೆ ಕಾರ್ಯಾಗಾರಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ..
3. ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು/ ದೊಡ್ಡಬಳ್ಳಾಪುರ ತಾಲ್ಲೂಕು / ಹೊಸಕೋಟೆ ತಾಲ್ಲೂಕು / ನೆಲಮಂಗಲ ತಾಲ್ಲೂಕು ರವರಿಗೆ ಕಳುಹಿಸುತ್ತಾ, ಕ್ರೋಢೀಕೃತ ಅರಣ್ಯ ಭೂಮಿಗಳಿಗೆ ಸಂಬಂಧಿಸಿದಂತೆ ಮಾಹಿತಿಯೊಂದಿಗೆ ಕಾರ್ಯಾಗಾರಕ್ಕೆ ಹಾಜರಾಗುವಂತೆ ತಿಳಿಸಿದೆ.